Rotary

# JASMINE

ಜಾಸ್ಮಿನ್ | जास्मिन

UNITE FOR GOOD

WEEKLY BULLETIN OF ROTARY CLUB KUNDAPURA SOUTH


Charter No. 23496 Zone 1, R. I. Dist. 3182 Charter Date : 04-03-1986



Rtn. Francesco Arezzo
RI President



Rtn. Palaksha K.
Dist. Governor



Rtn. PHF. I. Narayana
Asst. Governor



Rtn. Koushik Yadiyal
Zonal Lieutenant



40h year of Service and Fellowship


Volume 40 Issue - 44 7th May 2026

## Mutual Fund

### By

**Rtn. P.P Prakashchandra Shetty**
Rotary Club Kundapura

Time : 7.00 p.m.
Venue : Hotel Shivaprasad Grand, Kundapura



Rtn. Sachin Nackathaya
President



Rtn. Gerald Crasto
Secretary



Rtn. Ramananda Karanth
Bulletin Editor

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

# ಸಂಪಾದಕೀಯ :



ನನ್ನೊಲವಿನ ರೋಟರಿ ಮಿತ್ರರೇ

ಇಂದು ಕೂಡ ನಾನು ನನ್ನ ಮನದ ಚಿಂತನೆ ತಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ಪ್ರತಿದಿನ ದೇಶದಲ್ಲಿ ಕನಿಷ್ಟ ನೂರು ಜನ ರಸ್ತೆ ಅಪಘಾತದಲ್ಲಿ ಸಾಯುತ್ತಾರೆ. ಆದರೆ ನಾವು ಅದನ್ನು ಹೆಚ್ಚು ಗಣನೆಗೇ ತೆಗೆದುಕೊಳ್ಳುವುದಿಲ್ಲ. ಅದೇ ಅಪರೂಪಕ್ಕೊಮ್ಮೆ ಎಲ್ಲೋ ಭಯೋತ್ಪಾದಕರ ದಾಳಿ 30 ಸಾವು 40 ಸಾವು ಎಂಬ ವಾರ್ತೆ ಬಂದರೆ ನಾವು ಭಯಭೀತರಾಗುತ್ತೇವೆ. ಹೆಚ್ಚಿನ ಅಪಘಾತಗಳು ಮನುಷ್ಯನ ಅತಿಯಾದ ಆತ್ಮವಿಶ್ವಾಸದಿಂದ ಉಂಟಾಗುವುದಾಗಿದೆ. ಉದಾ: ಒಬ್ಬ ವ್ಯಕ್ತಿ ಕುಂದಾಪುರದಿಂದ ಮಂಗಳೂರಿಗೆ ಬೈಕಿನಲ್ಲಿ ಹೋಗುತ್ತೇನೆ ಎಂದಾಗ ಹಿರಿಯರು ಮಗ ಬೇಡ ಬಸ್ಸಿಲ್ಲವೇ ಬೈಕಲ್ಲಿ ಅಪಾಯವಲ್ಲವೇ? ಅಥವಾ ಹೆಲ್ಮೆಟ್ ಹಾಕಿಕೊಳ್ಳಬಹುದಲ್ಲವೇ? ಎಂದರೆ ಆ ವ್ಯಕ್ತಿ ಉಡಾಪೆಯಿಂದಲೇ "ಸಾಯುವುದಿದ್ದರೆ ಎಲ್ಲೂ ಸಾಯುತ್ತಾರೆ" ಎಂಬ ಮಾತನ್ನು ಹೇಳುತ್ತಾನೆ. ಆ ವ್ಯಕ್ತಿಗೆ ನನ್ನ ಒಂದು ಪ್ರಶ್ನೆ ಹಾಗಾದರೆ ನೀನು 2ನೇ ಮಾಳಿಗೆಯಿಂದ ಮೆಟ್ಟಿಲುಗಳು ಅಥವಾ ಲಿಫ್ಟ್‌ನಿಂದ ಏಕೆ ಬರುವೆ ಮೇಲಿಂದಲೇ ಹಾರಬಹುದಲ್ಲ! ಇದಕ್ಕೆ ಉತ್ತರ ಇದೆಯೇ? ಅಂತೆಯೇ ಮಿತ್ರರೇ ನಾವು ನೀವು ಸಂಚರಿಸುವ ದಾರಿಯೂ ಪ್ರತಿಯೊಬ್ಬ ಪ್ರಜೆಗೂ ನಾವು ಸುರಕ್ಷಿತವಾಗಿ ಇಲ್ಲಿ ಪ್ರಯಾಣಿಸುತ್ತಿದ್ದೇವೆ ಎಂಬ ಸಂಚರಿಸುವಾಗ ಅನುಭೂತಿ ಉಂಟಾಗಬೇಕು. ಇದಕ್ಕೆ ಸರಕಾರವೊಂದೇ ಜವಾಬ್ದಾರಿ ಅಲ್ಲ ಪ್ರಜೆಗಳಾದ ನಮ್ಮ ಮೇಲೂ ಅಪಾರ ಜವಾಬ್ದಾರಿ ಇರುತ್ತದೆ. ಅಂತು ಇಂತೂ ರಸ್ತೆ ಆಯಿತು. ಆಗ ಆ ರಸ್ತೆಯ ಸಾಮರ್ಥ್ಯಕ್ಕಿಂತ ಜಾಸ್ತಿ ವಾಹನಗಳನ್ನು ಚಲಾಯಿಸುತ್ತೇವೆ. ನಮ್ಮ ದೇಶದಲ್ಲಿ ಸರ್ವೇ ಮಾಡಲು ಹೋದರೆ ಮಾಡಿರುವ ಚತುಷ್ಪದದ ಸಾಮರ್ಥ್ಯದ ಎರಡು ಪಟ್ಟು ವಾಹನಗಳು ಪ್ರಸ್ತುತ ಸಂಚರಿಸುತ್ತಿವೆ. ತರತರಹದ ಕಾರುಗಳು ಮಾರುಕಟ್ಟೆಗೆ ಬರುತ್ತಿದೆ. ಅತಿಯಾದ ವೇಗ ಸಾಮರ್ಥ್ಯವುಳ್ಳ ಕಾರುಗಳು ಇಂದು ಚಾಲ್ತಿಯಲ್ಲಿದೆ ಆದರೆ ಒಮ್ಮೆ ಯೋಚಿಸಿ ನಮ್ಮ ರಸ್ತೆಗಳು ಅದಕ್ಕೆ ಅನುಗುಣವಾಗಿವೆಯೇ? ಹೋಗಲಿ ಈ ದೇಶದಲ್ಲಿ ಎಲ್ಲರೂ ರಸ್ತೆ ನಿಯಮವನ್ನು ಸರಿಯಾಗಿ ಪಾಲಿಸುತ್ತಿದ್ದಾರೆಯೇ? ಹೊಸ ವೇಗವಾಗಿ ಓಡಿಸುವ ಕಾರನ್ನುತೆಗೆದುಕೊಂಡ ವ್ಯಕ್ತಿ ತಾನೊಬ್ಬ ರಸ್ತೆ ನಿಯಮ ಪಾಲಿಸಿದರೆ ಸಾಲದು ಎದುರು ಬರುವವನ ತಪ್ಪಿನಿಂದ ಅನಾಹುತವಾಗುತ್ತದೆ. ಇದರ ಅರ್ಥ ಅಂಥ ವಾಹನಗಳನ್ನು ಖರೀದಿಸಬೇಡಿ ಎಂದಲ್ಲ ಅದನ್ನು ಅತಿ ವೇಗದಿಂದ ಓಡಿಸದಿರಿ ಎಂದು ಇಲ್ಲಿ ತಿಳಿಸುತ್ತಿದ್ದೇನೆ. ಈ ನಿಟ್ಟಿನಲ್ಲಿ ನಮ್ಮ ರೋಟರಿ ಸಂಸ್ಥೆಯ ಪಿ.ಡಿ.ಜಿ. ರೊ. ಅಭಿನಂದನ್ ಶೆಟ್ಟಿ ಕೊಟ್ಟಕರೆ "ರಸ್ತೆ ಸುರಕ್ಷತೆ" ತೆಗೆದುಕೊಂಡ ಯೋಜನೆ, ನಿಜವಾಗಲೂ ಅಭಿನಂದನಾರ್ಹ. ಬನ್ನಿ ಮಿತ್ರರೇ ಈ ನಿಟ್ಟಿನಲ್ಲಿ ನಾವುಗಳು ಸಾಧ್ಯವಾದಷ್ಟು ನಮ್ಮ ಪ್ರಯತ್ನವನ್ನು ಹಾಕೋಣ ಇದರಿಂದ ಕೆಲವೊಂದು ಸಾವು ನೋವುಗಳನ್ನಾದರೂ ತಡೆಯೋಣ. ಕೊನೆಯದಾಗಿ ನಾವು ಸುರಕ್ಷಿತರಾಗಿ ಪ್ರಯಾಣಿಸೋಣ ಹಾಗೂ ಇತರರನ್ನೂ ಸುರಕ್ಷಿತರಾಗಿಸೋಣ.

**– ರೊ. ರಮಾನಂದ ಕಾರಂತ**

## ವಾರದ ವರದಿ




ತಾ. 30 ನೇ ಗುರುವಾರದಂದು ನಡೆದ ನಮ್ಮ ವಾರದ ಸಭೆಗೆ AUMUND ಫೌಂಡೇಷನ್ ಪ್ರವಕ್ತಾರ ಶ್ರೀ ಪ್ರಸಾದ್ ರಾವ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀಯುತರು Empowering Lives The Impact of AUMUND Foundation in India ಎಂಬ ವಿಚಾರದಲ್ಲಿ ಅತ್ಯಮೂಲ್ಯ ಮಾಹಿತಿಗಳನ್ನು ನಮ್ಮ ಸಭೆಯಲ್ಲಿ ಸಭಾಸದರೊಂದಿಗೆ ಹಂಚಿಕೊಂಡರು. ಶ್ರೀಯುತರು ಮಾತನಾಡುತ್ತಾ ಜರ್ಮನಿ ಮೂಲದ ಔಮಂಡ್ ಗ್ರೂಪ್ (AUMUND Group) ಸ್ಥಾಪಿಸಿರುವ ಔಮಂಡ್ ಫೌಂಡೇಶನ್ (AUMUND Foundation) ಭಾರತದಲ್ಲಿ ಸಾಮಾಜಿಕ, ಶೈಕ್ಷಣಿಕ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ

ಗಮನಾರ್ಹ ಬದಲಾವಣೆಗಳನ್ನು ತರುತ್ತಿದೆ. "ಯುವಜನರಿಗೆ ಶಿಕ್ಷಣ ಮತ್ತು ತರಬೇತಿ ನೀಡುವುದು ಭವಿಷ್ಯದ ಅತ್ಯಮೂಲ್ಯ ಹೂಡಿಕೆ" ಎಂಬ ಧ್ಯೇಯದೊಂದಿಗೆ ಈ ಸಂಸ್ಥೆಯು ಕಾರ್ಯನಿರ್ವಹಿಸುತ್ತಿದೆ.

ಭಾರತದಲ್ಲಿ ಔಮಂಡ್ ಫೌಂಡೇಶನ್‌ನ ಪ್ರಭಾವ ಮತ್ತು ಅದು ಒಳಗೊಂಡಿರುವ ಪ್ರಮುಖ ಕ್ಷೇತ್ರಗಳ ವಿವರಗಳನ್ನು ನೀಡಿದರು ಅವನೆಂದರೆ:

**1. ಪ್ರಮುಖ ಕಾರ್ಯಕ್ಷೇತ್ರಗಳು (Areas Covered) ಫೌಂಡೇಶನ್ ಮುಖ್ಯವಾಗಿ ಮೂರು ಆಯಾಮಗಳಲ್ಲಿ ಕೆಲಸ ಮಾಡುತ್ತದೆ:**

**ಶಿಕ್ಷಣ ಮತ್ತು ಶಾಲಾ ಸೌಲಭ್ಯಗಳು (Education & Schooling):** ಆರ್ಥಿಕವಾಗಿ ಹಿಂದುಳಿದ ಮತ್ತು ಗ್ರಾಮೀಣ ಭಾಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದು.

**ಸಾರ್ವಜನಿಕ ಆರೋಗ್ಯ (Public Health):** ದೂರದ ಹಳ್ಳಿಗಳಿಗೆ ವೈದ್ಯಕೀಯ ಸೌಲಭ್ಯ ಹಾಗೂ ಆರೋಗ್ಯ ಜಾಗೃತಿ ಮೂಡಿಸುವುದು.

**ವಿಕಲಚೇತನರ ಸಬಲೀಕರಣ (Empowerment of Specially-abled):** ದೈಹಿಕ ಮತ್ತು ಮಾನಸಿಕ ಸವಾಲುಗಳನ್ನು ಎದುರಿಸುತ್ತಿರುವ ಯುವಕರಿಗೆ ವೃತ್ತಿಪರ ತರಬೇತಿ ನೀಡುವುದು.

**2. ಭಾರತದಲ್ಲಿನ ಪ್ರಮುಖ ಯೋಜನೆಗಳು ಮತ್ತು ಪ್ರಭಾವ (Impact & Projects in India)**

ಭಾರತವು ಔಮಂಡ್ ಫೌಂಡೇಶನ್‌ನ ಜಾಗತಿಕ ಧನಸಹಾಯದ ಪ್ರಮುಖ ಕೇಂದ್ರಗಳಲ್ಲಿ ಒಂದಾಗಿದೆ. ಇಲ್ಲಿನ ಕೆಲವು ಪ್ರಮುಖ ಯೋಜನೆಗಳು ಹೀಗಿವೆ:

**2.1 ಕರ್ನಾಟಕದಲ್ಲಿ ಸಮಗ್ರ ಶಿಕ್ಷಣ ಮತ್ತು ಆರೋಗ್ಯ ಯೋಜನೆ (Holistic Education in Karnataka)**

ವಿಶೇಷವಾಗಿ ದಕ್ಷಿಣ ಭಾರತದ ಕರ್ನಾಟಕದಲ್ಲಿ ಸಂಸ್ಥೆಯು 'ಡಾನ್ ಬಾಸ್ಕೋ ಮೊಂಡು' (Don Bosco Mondo e.V.) ಸಂಸ್ಥೆಯೊಂದಿಗೆ ಕೈಜೋಡಿಸಿ ದೊಡ್ಡ ಮಟ್ಟದ ಪ್ರಭಾವ ಬೀರುತ್ತಿದೆ:

**ಬೆಂಗಳೂರಿನ ಸ್ಲಂ ಮಕ್ಕಳ ನೆರವು:** ಬೆಂಗಳೂರಿನ ಲಿಂಗರಾಜಪುರಂ ಕೊಳೆಗೇರಿ ಪ್ರದೇಶದ ಮಕ್ಕಳಿಗಾಗಿ ಪ್ರೀ-ಸ್ಕೂಲ್ (ಶಿಶುಪಾಲನಾ ಕೇಂದ್ರ) ಮತ್ತು ಸಂಜೆ ತರಗತಿಗಳನ್ನು ನಡೆಸಲಾಗುತ್ತಿದೆ. ಇಲ್ಲಿ ಮಕ್ಕಳಿಗೆ ಕಲಿಯಲು ಉತ್ತಮ ವಾತಾವರಣದ ಜೊತೆಗೆ ಪೌಷ್ಟಿಕ ಆಹಾರವನ್ನೂ ಒದಗಿಸಲಾಗುತ್ತಿದೆ.

**ಗ್ರಾಮೀಣ ಕಲಿಕಾ ಕೇಂದ್ರಗಳು:** ಕರ್ನಾಟಕದ ಅತ್ಯಂತ ಹಿಂದುಳಿದ ಹಾಗೂ ದೂರದ 15 ಹಳ್ಳಿಗಳಲ್ಲಿ ಮಕ್ಕಳಿಗಾಗಿ ವಿಶೇಷ ಕಲಿಕಾ ಮತ್ತು ಚಟುವಟಿಕೆ ಕೇಂದ್ರಗಳನ್ನು (Learning & Activity Centers) ಸ್ಥಾಪಿಸಲಾಗಿದೆ.

**ಸಂಚಾರಿ ಆರೋಗ್ಯ ಸೇವೆ (Mobile Healthcare):** ಸುಮಾರು 20 ಹಳ್ಳಿಗಳಲ್ಲಿ ಸಂಚಾರಿ ವೈದ್ಯಕೀಯ ವಾಹನಗಳ ಮೂಲಕ ಪ್ರಾಥಮಿಕ ಚಿಕಿತ್ಸೆ, ಉಚಿತ ಔಷಧ ವಿತರಣೆ, ಆರೋಗ್ಯ ಶಿಕ್ಷಣ ಮತ್ತು ವಾರ್ಷಿಕ ವೈದ್ಯಕೀಯ ಶಿಬಿರಗಳನ್ನು (ಒಜಜುಛಿಚಿಟ ಅಚಿಟಛಿ) ಆಯೋಜಿಸಲಾಗುತ್ತಿದೆ.

**ವಿಶೇಷ ಚೇತನರಿಗೆ ತರಬೇತಿ:** ದೈಹಿಕ ಹಾಗೂ ಮಾನಸಿಕ ವಿಕಲಚೇತನರಾಗಿರುವ ಯುವಕ-ಯುವತಿಯರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಡಲು ವೃತ್ತಿಪರ ತರಬೇತಿಯನ್ನು ನೀಡಲಾಗುತ್ತಿದೆ.

**2.2 ಶೈಕ್ಷಣಿಕ ಸಂಸ್ಥೆಗಳಿಗೆ ಬೆಂಬಲ (Support to Educational Institutions)**

ಭಾರತದ ಪ್ರಸಿದ್ಧ ವಸತಿ ಶಾಲೆಗಳು ಮತ್ತು ಸಂಸ್ಥೆಗಳ ಮೂಲಕ ಬಡ ಹಾಗೂ ಅನಾಥ ಮಕ್ಕಳ ಶಿಕ್ಷಣಕ್ಕೆ ಫೌಂಡೇಶನ್ ಆಸರೆಯಾಗಿದೆ:

ದಿ ಸಾಗರ್ ಸ್ಕೂಲ್ (The Sagar School - Rajasthan): ರಾಜಸ್ಥಾನದ ಈ ಪ್ರಸಿದ್ಧ ಶಾಲೆಯಲ್ಲಿ ಕೋವಿಡ್ ಅಥವಾ ಇತರ ಕಾರಣಗಳಿಂದ ಪೋಷಕರನ್ನು ಕಳೆದುಕೊಂಡು ಅನಾಥರಾದ ಹೆಣ್ಣುಮಕ್ಕಳಿಗೆ ಸಂಪೂರ್ಣ ಉಚಿತ ವಸತಿ ಶಿಕ್ಷಣ ಪಡೆಯಲು ಫೌಂಡೇಶನ್ ವಿದ್ಯಾರ್ಥಿವೇತನ (Scholarships) ನೀಡುತ್ತಿದೆ.

ಇತರ ಸಂಸ್ಥೆಗಳು: ಇದರೊಂದಿಗೆ ದಿ ಡೂನ್ ಸ್ಕೂಲ್ (The Doon School), ಲಾರೆನ್ಸ್ ಸ್ಕೂಲ್ (The Lawrence School) ಮತ್ತು ದಿ ವಾಲಂಟರಿ ಹೆಲ್ತ್ ಸರ್ವಿಸಸ್ (The Voluntary Health Services) ನಂತಹ ಸಂಸ್ಥೆಗಳ ಸಹಯೋಗದೊಂದಿಗೆ ದೇಶದ ವಿವಿಧೆಡೆ ಸಾಮಾಜಿಕ ಕಾರ್ಯಗಳನ್ನು ನಡೆಸುತ್ತಿದೆ.

**ಸಾರಾಂಶ (Conclusion)**

ಒಟ್ಟಾರೆಯಾಗಿ ಹೇಳುವುದಾದರೆ, ಔಮಂಡ್ ಫೌಂಡೇಶನ್ ಕೇವಲ ಧನಸಹಾಯ ಮಾಡುವುದಷ್ಟೇ ಅಲ್ಲದೆ, ಭಾರತದ ತಳಮಟ್ಟದ ಜನರಿಗೆ - ವಿಶೇಷವಾಗಿ ಕರ್ನಾಟಕದ ಗ್ರಾಮೀಣ ಮತ್ತು ಕೊಳೆಗೇರಿ ಪ್ರದೇಶದ ಮಕ್ಕಳಿಗೆ - ಶಿಕ್ಷಣ ಮತ್ತು ಆರೋಗ್ಯವನ್ನು ಒಟ್ಟಿಗೆ ತಲುಪಿಸುವ ಮೂಲಕ ಅವರ ಜೀವನದ ಗುಣಮಟ್ಟವನ್ನು ಸುಧಾರಿಸಲು ಶ್ರಮಿಸುತ್ತಿದೆ.

ವಿಶೇಷ ವೆಂದರೆ ನಮ್ಮ ರೋಟರಿ Innerwheel ಪ್ರಾಯೋಜಕತ್ವದೊಂದಿಗೆ ನಡೆಸಲ್ಪಡುತ್ತಿರುವ ಚೈತನ್ಯ ವಿಶೇಷ ಮಕ್ಕಳ ಶಾಲೆಯೂ ಸಹ AUMUND ಫೌಂಡೇಷನ್ ನಿಂದ ಸಹಾಯವನ್ನು ಪಡೆದಿರುವ ಶಾಲೆ ಆಗಿರುತ್ತದೆ. ಆಗಮಿಸಿದ ಅತಿಥಿಗಳನ್ನು ರೊ. ಕೆ. ಟಿ ಸುರೇಂದ್ರನಾಥ್ ಸಭೆಗೆ ಪರಿಚಯಿಸಿದರು. ಅಧ್ಯಕ್ಷ ರೊ. ಸಚಿನ್ ನಕ್ಕತಾಯ ಆಗಮಿಸಿದ ಸರ್ವರನ್ನು ಸ್ವಾಗತಿಸಿದರು. ರೊ. ಜೆರಾಲ್ಡ್ ಕ್ರಾಸ್ತಾ ವಾರದ ವರದಿ ವಾಚಿಸಿದರು. ರೊ. ನಂದಾ ನಾಯಕ್ ಕಾರ್ಯಕ್ರಮದ ಪ್ರಥಮದಲ್ಲಿ ಪ್ರಾರ್ಥನೆಯನ್ನು ನಡೆಸಿಕೊಟ್ಟರು. ರೊ. ಸತ್ಯನಾರಾಯಣ ಪುರಾಣಿಕ್ ವಾರದ ಚಿಂತನೆಯನ್ನು ತಿಳಿಸಿದರು. ರೊ. ಜುಡಿತ್ ಮೆಂಡೋನ್ಸ ರೋಟರಿ ಮಾಹಿತಿ ತಿಳಿಸಿದರು. ರೊ. ಕೆ ಕೆ ಕಾಂಚನ್ ಜಿಲ್ಲಾ ಅಧಿವೇಶನದ ಬಗ್ಗೆ ಮಾತನಾಡಿದರು. ಕೋಟೇಶ್ವರ ರೋಟರಿ ಕ್ಲಬ್‌ನ ರೊ. ಪ್ರಭಾಕರ ಕುಂಭಾಶಿ ಮುಂಬರುವ ಜಿಲ್ಲಾ ಅಧಿವೇಶನ **ಜ್ಞಾನವಲ್ಲರಿ** ಕಾರ್ಯಕ್ರಮಕ್ಕೆ ನಮ್ಮ ಸಂಸ್ಥೆಯ ಎಲ್ಲಾ ಸದಸ್ಯರು ನೋಂದಾಯಿಸಬೇಕೆಂದು ವಿನಂತಿಸಿ ಸರ್ವರನ್ನು ಸ್ವಾಗತಿಸಿದರು. ರೊ. ರಮಾನಂದ ಕಾರಂತ್ ಸಭೆಯ ಕೊನೆಯಲ್ಲಿ ಹಾಸ್ಯವನ್ನು ನಡೆಸಿಕೊಟ್ಟರು. ರೊ. ಸುರೇಖಾ ಪುರಾಣಿಕ್ ವಂದನಾರ್ಪಣೆ ಮಾಡಿದರು.

